

# ಮರುಳು ಮಾಡುವ ಮರಳಿನ ಕಲೆ

ವಿಶ್ವದಲ್ಲಿ ಮರಳಿನ ಕಲೆಯಲ್ಲಿ ಅಸಾಧಾರಣ ಕೈಚಳಕ ತೋರಿದ ಅನೇಕ ಕಲಾವಿದರಿದ್ದಾರೆ. ಆದರೆ ಜಪಾನಿನ ತೋಷಿಯಿಕೊ ಹೊಸಾಕ ಎಂಬ 43 ವರ್ಷದ ಕಲಾವಿದ ತಯಾರಿಸಿದ ಈ ಮರಳು ಕಲೆ ಬಿಸಿಲು, ಮಳೆ, ಗಾಳಿ ಬಂದರೂ ಕೊಂಚವೂ ಹಾಳಾಗದೆ ಹಾಗೇ ಉಳಿಯುತ್ತದೆ. ಇದಕ್ಕಾಗಿ ಈತ ಬಹುಮಾನವನ್ನೂ ಪಡೆದಿದ್ದಾನೆ!

ಸಮುದ್ರ ದಡದಲ್ಲಿ ರಾಶಿ ರಾಶಿಯಾಗಿರುವ ಮರಳೂ ಸಹ ಸುಂದರವಾದ ಕಲೆಯನ್ನು ಅಭಿವ್ಯಕ್ತಗೊಳಿಸುವ ಮಾಧ್ಯಮವಾಗಬಲ್ಲದು. ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನು ಸಹ ಅತ್ಯಂತ ನಾಜೂಕಾಗಿ ಉಸುಕಿನಲ್ಲಿ ಅಭಿವ್ಯಕ್ತಗೊಳಿಸುವ ಅತ್ಯದ್ಭುತ ಕಲಾವಿದ ಜಪಾನಿನ 43 ವರ್ಷ ವಯಸ್ಸಿನ  ತೋಷಿಯಿಕೊ ಹೊಸಾಕ.

ತನ್ನ ಶಾಲಾ ದಿನಗಳಲ್ಲಿಯೇ ಮರಳಿನಲ್ಲಿ ಶಿಲ್ಪಗಳನ್ನು ಸೃಷ್ಟಿಸುವ ಕಲೆಯನ್ನು ರೂಢಿಸಿಕೊಂಡಿದ್ದ ಹೊಸಾಕ, ಎರಡು ದಶಕಗಳಿಂದ ತನ್ನ ಕಲೆಯನ್ನು ಪ್ರದರ್ಶಿಸುತ್ತಿದ್ದಾನೆ. ಯಾವುದೇ ಮೋಲ್ಡ್ ಅಥವಾ ಅಂಟಿನ ಸಹಾಯವಿಲ್ಲದೆ ದೊಡ್ಡ ದೊಡ್ಡ ಗಾತ್ರದ ಮಾಸ್ಟರ್ ಪೀಸ್‌ಗಳನ್ನು ಮರಳಿನಲ್ಲಿ ರಚಿಸುವುದು ಈತನಿಗೆ ಕರಗತವಾಗಿದೆ. ಕೇವಲ ಲೋಹದ ಕೆತ್ತನೆ ಸಾಧನಗಳನ್ನು ಮಾತ್ರ ಬಳಸಿಕೊಂಡು ಈತ ಮರಳು ಶಿಲ್ಪ ರಚಿಸುತ್ತಾನೆ. ತೇವವಾಗಿರುವ ಮರಳಿನಲ್ಲಿ ಗಂಟೆಗಟ್ಟಲೆ ಕೆಲವೊಂದು ಬಾರಿ ದಿನಗಟ್ಟಳೆ ಈತ ಕಾಲ ಕಳೆಯುತ್ತಾನೆ. ಇದರ ಫಲಿತಾಂಶ ಯಾವಾಗಲೂ ಅತ್ಯದ್ಭುತ.

ಬೇರೆ ವಸ್ತುಗಳಿಂದ ರಚಿಸಿದ ಕಲಾ ರಚನೆಗಳು ಬಹುಕಾಲ ಬಾಳಿಕೆ ಬರುತ್ತವೆ. ಮರಳು ಶಿಲ್ಪಗಳಿಗೆ ಮಾತ್ರ ಅತ್ಯಲ್ಪ ಆಯಸ್ಸು. ಆದರೆ ಜಪಾನಿನ ಈ ಜಾಣ ಅದಕ್ಕೊಂದು ಪರಿಹಾರ ಕಂಡುಕೊಂಡಿದ್ದಾನೆ. ವಿಶೇಷ ಸ್ಪ್ರೇಯನ್ನು ಹೊರಪದರಕ್ಕೆ ಸಿಂಪಡಿಸಿ, ಕಲಾಕೃತಿಯು ಕೆಲದಿನಗಳ ಕಾಲ ಬಿಸಿಲು ಮಳೆ ಗಾಳಿಯಿಂದ ಹಾಳಾಗದಂತೆ ರಕ್ಷಿಸಿಡುತ್ತಾನೆ. ಇದಕ್ಕಾಗಿ ಬಹಳ ಹಿಂದೆಯೇ ರಾಸಾಯನಿಕ ಕಂಪನಿಯ ಸಹಯೋಗದೊಂದಿಗೆ ಪರಿಸರ ಸ್ನೇಹಿ ಸ್ಯಾಂಡ್ ಆರ್ಟ್ ಸ್ಪ್ರೇಯನ್ನು ತಯಾರಿಸಿಕೊಂಡಿದ್ದಾನೆ.

ತೋಷಿಯಿಕೊ ಹೊಸಾಕ ನು ಇಡೀ ಜಗತ್ತಿನಲ್ಲಿಯೇ ಅತ್ಯಂತ ಮೇಧಾವಿ ಮರಳು ಶಿಲ್ಪ ಕಲಾವಿದರಲ್ಲಿ ಒಬ್ಬನಾಗಿದ್ದಾನೆ. ಹಲವಾರು ಮರಳು ಕೆತ್ತನೆ ಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಕಷ್ಟು ಪ್ರಶಸ್ತಿಗಳನ್ನು ಪಡೆದಿದ್ದಾನೆ. ಇತ್ತೀಚೆಗೆ ತೈವಾನ್‌ನಲ್ಲಿ ಜರುಗಿದ ಫುಲಾಂಗ್ ಸ್ಯಾಂಡ್ ಆರ್ಟ್ ಫೆಸ್ಟಿವಲ್‌ನಲ್ಲಿ ಜಪಾನಿನ ದಂತಕಥೆಯಾಗಿರುವ ಖಡ್ಗಧಾರಿ ಮುಸಾಷಿ ಮಿಯಾಮೊಟೊನ ಶಿಲ್ಪ ರಚಿಸಿ ಮೊದಲ ಬಹುಮಾನವನ್ನು ತನ್ನದಾಗಿಸಿಕೊಂಡಿದ್ದಾನೆ.

■ ಪ್ರಿಯಾಂಕ ವಿ.ಎಚ್.

